# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1


Vol.No.02 | Issue. 50 | Pages. 2 | Date: 21-01-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 50 - ಪುಟಗಳು : 2 | 21-01-2026 | ಬುಧವಾರ | Ph: 8762954248 | ದರ : ₹1


# ಭೀಮಾ ಕೋರೆಗಾವ್ ಯುದ್ಧವಲ್ಲ

## ಶೋಷಣೆ-ಅಸ್ಪೃಶ್ಯತೆ ವಿರುದ್ಧದ ಆತ್ಮಗೌರವದ ಹೋರಾಟ : ಭೀಮ್ ರಾವ್ ವೈ. ಅಂಬೇಡ್ಕರ್





## ನಗರದಲ್ಲಿ ಅದ್ದೂರಿ ಮೆರವಣಿಗೆ: ಭೀಮನ ಹಾಡಿಗೆ ದನಿಯಾದ ಸಹಸ್ರಾರು ಮಂದಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಇದೇ ಮೊದಲ ಬಾರಿಗೆ ನಗರದಲ್ಲಿಂದು ಭೀಮ ಕೋರೆಗಾಂವ್ ವಿಜಯೋತ್ಸ ವ ಸ್ಮರಣಾರ್ಥ ಅದ್ದೂರಿ ಮೆರವಣಿಗೆ ನಡೆಯಿತು.

ಅಂಬೇಡ್ಕರ್ ಅವರ ಮೊಮ್ಮಗ ಭೀಮರಾವ್ ಅಂಬೇಡ್ಕರ್ ಅವರು ಇದೇ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಿ ವಿಜಯೋತ್ಸ ವ ಮೆರವಣಿಗೆಗೆ ಮೆರುಗು ನೀಡಿದರು.

ವಿಜಯೋತ್ಸವ ಅಂಗವಾಗಿ ನಗರದ ರೈಲ್ವೆ ನಿಲ್ದಾಣದಿಂದ ಆರಂಭವಾದ ಬೃಹತ್ ಮೆರವಣಿಗೆಯಲ್ಲಿ ಸಹಸ್ರಾರು ಮಂದಿ ಭಾಗಿಯಾಗಿದ್ದರು.

ಮೆರವಣಿಗೆ ಉದ್ದಕ್ಕೂ ನೀಲಿ ಬಾವುಟ ರಾರಾಜಿಸಿದವು. ಡಿಜೆಯಲ್ಲಿ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಕುರಿತಾದ ಕ್ರಾಂತಿ ಗೀತೆಗಳು ಮೊಳಗಿದವು.

ಇದೇ ವೇಳೆ ಡಿಜೆ ಸೌಂಡಿಗೆ ವಿವಿಧ ಸಂಘಟನೆಗಳ ಮುಖಂಡರು, ಯುವಕರು ಹೆಜ್ಜೆ ಹಾಕುವ ಮೂಲಕ, ಅಂಬೇಡ್ಕರ್ ಹಾಗೂ ಕೋರೆಗಾಂವ್ ವಿಜಯೋತ್ಸ ವದ ಬಗ್ಗೆ ಘೋಷಣೆ ಮೊಳಗಿಸುವ ಮೂಲಕ ಅಕ್ಷರಶಃ ಸಂಭ್ರಮಿಸಿದರು. ಬೃಹತ್ ಮೆರವಣಿಗೆಗೆ ಕಲಾತಂಡಗಳು ಇನ್ನಷ್ಟು ಮೆರುಗು ನೀಡಿದವು.

ರೈಲ್ವೆ ನಿಲ್ದಾಣದಿಂದ ವೇದಿಕೆ ಕಾರ್ಯಕ್ರಮ ನಡೆದ ತಹಸೀಲ್ದಾರ್ ಕಚೇರಿವರೆಗೂ (ಪ್ರಜಾಸೌಧ) ಭೀಮರಾವ್ ಅಂಬೇಡ್ಕರ್ ಹಾಗೂ ಇತರರನ್ನು ಬೆಳ್ಳಿ ರಥದ ಮೇಲೆ ಮೆರವಣಿಯಲ್ಲಿ ಕರೆ ತರಲಾಯಿತು.

ಮುನ್ನೆಚ್ಚರಿಕೆಯಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಯಶಸ್ವಿ: ಇದೇ ಮೊದಲ ಬಾರಿಗೆ ಭೀಮಾ ಕೋರೆಗಾಂವ್ ವಿಜಯೋತ್ಸ ವ ಆಚರಣಾ ಸಮಿತಿಯವರು ಕಳೆದ ಒಂದು ತಿಂಗಳಿಂದ ಕಾರ್ಯಕ್ರಮಕ್ಕೆ ಶ್ರಮಿಸಿದ್ದರು. ಅವರ ಪ್ರಯತ್ನದ ಫಲವಾಗಿ ಇಂದು ವಿಜಯೋತ್ಸ ವ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ನಿರೀಕ್ಷೆಗೂ ಮೀರಿ ವಿವಿಧ ಸಂಘಟನೆಗಳ ಜನರು ಆಗಮಿಸಿ ಬೆಂಬಲ ವ್ಯಕ್ತಪಡಿಸಿದರು.

ಭೀಮ ಕೋರೆಗಾಂವ್ ಒಂದು ಐತಿಹಾಸಿಕ ಹೋರಾಟವಾಗಿದೆ, ಕಡಿಮೆ ಸಂಖ್ಯೆಯ ತಳ ಸಮುದಾಯ, ತಮ್ಮ ಹಕ್ಕಿಗಾಗಿ ದೊಡ್ಡ ಸಂಖ್ಯೆಯ ಬಲಾಢ್ಯರ ಜೊತೆ ಯುದ್ಧಮಾಡಿ ಜಯಗಳಿಸಿದ ಐತಿಹಾಸಿಕ ಹೋರಾಟದ ವಿಜಯದ ದಿನವಾಗಿದ್ದು, ಆ ದಿನದ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆ ನಿರೀಕ್ಷೆ ಮೀರಿ ಯಶಸ್ವಿಯಾಯಿತು.



## ಶಿಕ್ಷಣ ಪಡೆಯಿರಿ, ಸಂಘಟಿತರಾಗಿರಿ, ಹೋರಾಡಿರಿ

ಹಾಸನ: ಭೀಮಾ ಕೋರೆಗಾವ್ ಕೇವಲ ಯುದ್ಧವಲ್ಲ; ಅದು ಶೋಷಣೆ, ಅಸ್ಪೃಶ್ಯತೆ ಹಾಗೂ ಅನ್ಯಾಯದ ವಿರುದ್ಧ ನಡೆದ ಶಾಶ್ವತ ಆತ್ಮಗೌರವದ ಹೋರಾಟವಾಗಿದೆ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಹಾಗೂ ಭಾರತೀಯ ಭೌದ್ಧ ಮಹಾಸಭಾ (ಮುಂಬೈ)ಯ ರಾಷ್ಟ್ರೀಯ ಕಾರ್ಯಾಧ್ಯಕ್ಷ ಭೀಮ್ ರಾವ್ ವೈ. ಅಂಬೇಡ್ಕರ್ ಹೇಳಿದರು.

ಹಾಸನ ನಗರದಲ್ಲಿ ಮಂಗಳವಾರ ಮೊದಲ ಬಾರಿಗೆ ಆಯೋಜಿಸಲಾಗಿದ್ದ 208ನೇ ಭೀಮಾ ಕೋರೆಗಾವ್ ವಿಜಯೋತ್ಸ ವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ವಿಜಯೋತ್ಸ ವವನ್ನು ಕೇವಲ ಯುದ್ಧದ ಜಯೋತ್ಸ ವವಾಗಿ ಸೀಮಿತಗೊಳಿಸಬಾರದು. ಇದು ಶೋಷಣೆ, ಅಸ್ಪೃಶ್ಯತೆ ಮತ್ತು ಅನ್ಯಾಯದ ವಿರುದ್ಧ ನಡೆದ ಆತ್ಮಗೌರವದ ಹೋರಾಟದ ಸಂಕೇತವಾಗಿದೆ ಎಂದರು.





ಗೌರವಕ್ಕಾಗಿ, ಹಕ್ಕುಗಳಿಗಾಗಿ ಹಾಗೂ ಸಂವಿಧಾನದ ಸಮರ್ಪಕ ಅನುಷ್ಠಾನಕ್ಕಾಗಿ ನಡೆಯುತ್ತಿರುವ ಹೋರಾಟವೇ ಭೀಮಾ ಕೋರೆಗಾವ್ ವಿಜಯೋತ್ಸ ವ. ಡಾ. ಅಂಬೇಡ್ಕರ್ ನಮಗೆ ನೀಡಿದ ಮಹಾಮಂತ್ರ "ಶಿಕ್ಷಣ ಪಡೆಯಿರಿ, ಸಂಘಟಿತರಾಗಿರಿ, ಹೋರಾಡಿರಿ'' ಎಂಬುದಾಗಿದೆ ಎಂದು ಅವರು ನೆನಪಿಸಿದರು.

2020ರ ನಂತರ ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳ ನೀತಿಗಳಿಂದಾಗಿ ಸಂವಿಧಾನಾತ್ಮಕ ಹಕ್ಕುಗಳು ದುರ್ಬಲಗೊಳ್ಳುತ್ತಿವೆ. ಮೀಸಲಾತಿ ನೀತಿಯ ಸರಿಯಾದ ಅನುಷ್ಠಾನವಾಗುತ್ತಿಲ್ಲ. ಸರ್ಕಾರಿ ಸಂಸ್ಥೆಗಳ ಖಾಸಗೀಕರಣದಿಂದ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಭೀಮಾ ಕೋರೆಗಾವ್ ವಿಜಯೋತ್ಸ ವವನ್ನು ನಾವು ಕೇವಲ ಆಚರಣೆಯಾಗಿ ಅಲ್ಲ, ಆತ್ಮಗೌರವದ ಸಂಕೇತವಾಗಿ ಆಚರಿಸಬೇಕು. 2018ರಲ್ಲಿ ನಡೆದ ಘಟನೆಗಳ ಬಳಿಕ ಈ ಇತಿಹಾಸ ದೇಶಾದ್ಯಂತ ಮಾತ್ರವಲ್ಲ, ವಿದೇಶಗಳಲ್ಲೂ ಚರ್ಚೆಗೆ ಬಂದಿದೆ. ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಈಗ ಜನರಿಗೆ ಈ ಇತಿಹಾಸ ತಿಳಿಯತೊಡಗಿದೆ. ಇದು ಕೇವಲ ನಮ್ಮ ಸಮುದಾಯದ ಇತಿಹಾಸವಲ್ಲ; ಸಮಾನತೆ, ನ್ಯಾಯ ಮತ್ತು ಮಾನವೀಯ ಗೌರವಕ್ಕಾಗಿ ನಡೆದ ಹೋರಾಟದ ಇತಿಹಾಸವಾಗಿದೆ. ಈ ಸತ್ಯವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ನಮ್ಮದು ಎಂದು ಹೇಳಿದರು.

> ನಗರದ ರೈಲು ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಭೀಮಾ ಕೋರೆಗಾವ್ ವಿಜಯ ಸ್ತಂಭದ ಬೃಹತ್ ಮೆರವಣಿಗೆ ನಡೆಯಿತು. ನಂತರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಡಬಲ್ ರೋಡ್ (ಪ್ರಜಾ ಸೌಧ ಹತ್ತಿರ)ದಲ್ಲಿ ಸಾರ್ವಜನಿಕ ಸಮಾವೇಶ ಜರುಗಿತು. ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗ, ಕಾರ್ಮಿಕ ಹಾಗೂ ಮಹಿಳಾ ಸಂಘಟನೆಗಳ ಒಗ್ಗೂಡಿಕೆ ಈ ಕಾರ್ಯಕ್ರಮದ ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ನಿವೃತ್ತ ಡಿಸಿಪಿ ಹಾಗೂ ರಾಜ್ಯಾಧ್ಯಕ್ಷರಾದ ಎಸ್. ಸಿದ್ದರಾಜು, ಭೀಮಾ ಕೋರೆಗಾವ್ ವಿಜಯೋತ್ಸ ವ ನಮ್ಮ ಬದುಕಿಗೆ ದಿಕ್ಕು ತೋರಿಸುವ ಮಹತ್ವದ ಘಟನೆ. ಸದಾ ಜಾಗೃತರಾಗಿ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕಾಗಿದೆ ಎಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೊಮ್ಮಗನನ್ನು ಹಾಸನದಲ್ಲಿ ಕಾಣುವುದು ಸಂತೋಷ ತಂದಿದೆ. ಅಂಬೇಡ್ಕರೀಯ ಚಿಂತನೆಯೇ ಸಮ ಸಮಾಜ ನಿರ್ಮಾಣಕ್ಕೆ ದಾರಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ದಲಿತ ಮುಖಂಡ ಸಂದೇಶ್ ವಹಿಸಿದ್ದರು. ಆಪ್ತವಿಕ ಭಾಷಣವನ್ನು ದಲಿತ ಮುಖಂಡ ಅಂಬುಗ ಮಲ್ಲೇಶ್ ನೆರವೇರಿಸಿದರು. ಕಾರ್ಯಕ್ರಮವನ್ನು ಪತ್ರಕರ್ತ ಹೆತ್ತೂರು ನಾಗರಾಜ್ ನಿರೂಪಿಸಿದರು.

ಮೆರವಣಿಗೆಗೆ ಭಾರತೀಯ ಬೌದ್ಧ ಮಹಾಸಭಾ, ದಲಿತ ಸಮನ್ವಯ ಸಮಿತಿ, ದಲಿತ ನೌಕರರ ಸಮನ್ವಯ ಸಮಿತಿ, ಬುಡಕಟ್ಟು ಸಮಿತಿ, ಎಸ್‌ಸಿ/ಎಸ್‌ಟಿ ಗುತ್ತಿಗೆದಾರರ ಒಕ್ಕೂಟ ಸೇರಿದಂತೆ ಹತ್ತಾರು ಸಂಘಟನೆಗಳು ಬೆಂಬಲ ಸೂಚಿಸಿ ಭಾಗಿಯಾಗಿದ್ದವು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಎಲ್ಲರೂ ಭೀಮಾ ಕೋರೆಗಾಂವ್ ಹಿನ್ನೆಲೆ, ವಿಜಯೋತ್ಸ ವ, ಇದರ ಪ್ರೇರಣೆಯಿಂದ ದಮನಿತರು ಸಂಘಟಿತರಾಗಬೇಕಾದ ಅನಿವಾರ್ಯತೆ ಬಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ಆಚರಣಾ ಸಮಿತಿ ಅಧ್ಯಕ್ಷ ಹೆಚ್.ಕೆ.ಸಂದೇಶ್, ಉಪಾಧ್ಯಕ್ಷರಾದ ಅಂಬುಗ ಮಲ್ಲೇಶ್, ಸೋಮಶೇಖರ್, ರಾಜಶೇಖರ್, ವೀರೇಶ್ ಈರೇಹಳ್ಳಿ, ವಿಜಯಕುಮಾರ್, ಶಿವಮ್ಮ, ಭಾಗ್ಯ ಕಲೀವಿರ್, ತೇಜೂರು ಮಂಜು, ನಾಗರಾಜ ಹೆತ್ತೂರು, ಗೊರೂರು ರಾಜು, ವೆಂಕಟೇಶ್ ಬ್ಯಾಕರವಳ್ಳಿ, ಜೈಭೀಮ್ ಬಿಗ್ರೇಡ್ ರಾಜೇಶ್, ಜಗದೀಶ್ ಚೌಡಹಳ್ಳಿ, ಧರ್ಮೇಶ್, ಪೃಥ್ವಿ, ಗೋವಿಂದರಾಜು, ಮಣಿಕಂಠ, ದೇವರಾಜು, ಪ್ರದೀಪ್, ನವೀನ್, ರಾಮು, ತೋಟೇಶ್, ಪ್ರಸನ್ನ, ಬಾನುಪ್ರಕಾಶ್, ರಮೇಶ್, ಶಿವಕುಮಾರ್ ಸಾತೇನಹಳ್ಳಿ ಹಾಗೂ ಜಿಲ್ಲೆಯ ಎಲ್ಲಾ ಹಿರಿಯ ಹಾಗೂ ಕಿರಿಯ ದಲಿತ ಮುಖಂಡರು, ಸಹಸ್ರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗಿಯಾಗಿದ್ದರು.

## ಕುಡಿದ ಮತ್ತಿನಲ್ಲಿ ಸ್ನೇಹಿತರ ಜಗಳ ಕೊಲೆಯಲ್ಲಿ ಅಂತ್ಯ

# ಪ್ರಾಣಿ ಕಡಿತದಿಂದ ಕ್ರೈಂ ಸೀನ್ ಭೀಭತ್ಸ !

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕುಡಿದ ಮತ್ತಿನಲ್ಲಿ ಸ್ನೇಹಿತರ ನಡುವೆ ಆರಂಭವಾದ ಜಗಳ ತಾರಕಕ್ಕೇರಿದ್ದು, ಕೊನೆಗೆ ಸ್ನೇಹಿತನ ಹತ್ಯೆಯಲ್ಲಿ ಅಂತ್ಯಗೊಂಡ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಕಬ್ಬೂರು ಗ್ರಾಮದಲ್ಲಿ ನಡೆದಿದೆ.

ಮೃತನನ್ನು ಗಣೇಶ (46) ಎಂದು ಗುರುತಿಸಲಾಗಿದೆ. ಈ ಪ್ರಕರಣದಲ್ಲಿ ಗಣೇಶನ ಸ್ನೇಹಿತರಾದ ಸುಧೀರ್ ಹಾಗೂ ಅಶೋಕ ಕೊಲೆ ಆರೋಪಿಗಳಾಗಿದ್ದಾರೆ.



ನಿನ್ನೆ ರಾತ್ರಿ ಕಾಡು ಹಂದಿಗಳಿಂದ ಬೆಳೆಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ಗಣೇಶ, ಸುಧೀರ್ ಮತ್ತು ಅಶೋಕ ಜಮೀನಿನ ಬಳಿ ತೆರಳಿದ್ದರು. ಈ ವೇಳೆ ಮೂವರು ಜಮೀನಿನಲ್ಲೇ ಕಂಠಪೂರ್ತಿ ಮದ್ಯ ಸೇವಿಸಿದ್ದಾರೆ. ಮದ್ಯಪಾನದ ನಶೆಯಲ್ಲಿ ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ವಾಗ್ವಾದ ಆರಂಭವಾಗಿ, ಮಾತಿಗೆ ಮಾತು ಬೆಳೆದು ಗಲಾಟೆಯಾಗಿ ಮಾರ್ಪಟ್ಟಿದೆ.

ಗಲಾಟೆಯ ತೀವ್ರತೆಯಲ್ಲಿ ಆರೋಪಿಗಳಾದ ಸುಧೀರ್ ಮತ್ತು ಅಶೋಕ ಕುಡುಗೋಲಿನಿಂದ ಗಣೇಶನ ಕುತ್ತಿಗೆಗೆ ಇರಿದು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಬಳಿಕ ಆರೋಪಿಗಳು ಜಮೀನಿನಲ್ಲೇ ಮೃತದೇಹವನ್ನು ಬಿಟ್ಟು ಸ್ಥಳದಿಂದ ಪರಾರಿಯಾಗಿದ್ದಾರೆ.

ರಾತ್ರಿ ವೇಳೆ ಮೃತದೇಹದ ತಲೆ ಹಾಗೂ ಕುತ್ತಿಗೆ ಭಾಗವನ್ನು ಚಿರತೆ ಅಥವಾ ಮುಂಗುಸಿ (ಕೀರ) ಕಚ್ಚಿ ತಿಂದಿರುವ ಅನುಮಾನ ವ್ಯಕ್ತವಾಗಿದೆ.

ಬೆಳಿಗ್ಗೆ ಕರ್ತವ್ಯಕ್ಕೆ ತೆರಳಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಜಮೀನಿನಲ್ಲಿ ಬಿದ್ದಿದ್ದ ಮೃತದೇಹವನ್ನು ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಪಡೆದ ಪೊಲೀಸರು ಹಾಗೂ ಸೋಕೋ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಘಟನೆ ಹಳ್ಳಿಮೈಸೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಶೋಧ ಕಾರ್ಯಾಚರಣೆ ಕೈಗೊಂಡಿದ್ದಾರೆ.

## ಹಾಸನದಲ್ಲಿ ಶಾಲಾ ಬಾಲಕಿಯನ್ನು ಹಿಂಬಾಲಿಸಿದ್ದ ಅಪರಿಚಿತ

# ಸಿಸಿಟಿವಿಯಲ್ಲಿ ಸೆರೆಯಾದ ಆತಂಕಕಾರಿ ದೃಶ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದಲ್ಲಿ ಶಾಲೆಯಿಂದ ಮನೆಗೆ ಮರಳುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಅಪರಿಚಿತ ವ್ಯಕ್ತಿಯೊಬ್ಬ ಹಿಂಬಾಲಿಸಿದ್ದ ಘಟನೆ ಆತಂಕಕ್ಕೆ ಕಾರಣವಾಗಿದೆ. ಈ ಘಟನೆ ಪೆನ್ ಷನ್ ಮೊಹಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯ 80 ಅಡಿ ರಸ್ತೆಯಲ್ಲಿ, ಕಳೆದ ಶನಿವಾರ ಮಧ್ಯಾಹ್ನ 12.52ರ ಸುಮಾರಿಗೆ ನಡೆದಿದೆ.

ಶಾಲೆ ಬೇಗ ಬಿಟ್ಟಿದ್ದ ಹಿನ್ನೆಲೆಯಲ್ಲಿ ಶಿಕ್ಷಕರು ಬಾಲಕಿಯನ್ನು ಶಾಲಾ ಬಸ್ ನಲ್ಲೇ ಮನೆ ಸಮೀಪ ಇಳಿಸಿದ್ದರು. ಮನೆ ಕಡೆ ನಡೆದುಕೊಂಡು ಬರುತ್ತಿದ್ದ ಬಾಲಕಿಯನ್ನು ಅಪರಿಚಿತ ವ್ಯಕ್ತಿಯೊಬ್ಬ ಹಿಂಬಾಲಿಸಿಕೊಂಡು ಬಂದಿದ್ದಾನೆ.

ಅಪಾಯವನ್ನು ಅರಿತ ಬಾಲಕಿ, ಮನೆ ಬಳಿ ಬಂದ ವ್ಯಕ್ತಿಗೆ "ಇಲ್ಲಿ ಸಿಸಿಟಿವಿ ಕ್ಯಾಮೆರಾ ಇದೆ'' ಎಂದು ಧೈರ್ಯವಾಗಿ ಹೇಳಿದ್ದಾಳೆ.

ಇದರಿಂದ ಗಾಬರಿಗೊಂಡ ಆತ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ನಂತರ ಮನೆಗೆ ಬಂದ ತಾಯಿ ಹಾಗೂ ಅಜ್ಜಿ ಬಳಿ ಬಾಲಕಿ ನಡೆದ ಘಟನೆ ವಿವರಿಸಿದ್ದಾಳೆ.

ಘಟನೆ ಬಳಿಕ ಪೋಷಕರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ಅಪರಿಚಿತ ವ್ಯಕ್ತಿ ಬಾಲಕಿಯನ್ನು ಹಿಂಬಾಲಿಸಿದ್ದ ದೃಶ್ಯಗಳು ಸ್ಪಷ್ಟವಾಗಿ ದಾಖಲಾಗಿರುವುದು ಕಂಡುಬಂದಿದೆ.



ಜರ್ಕಿನ್ ಹಾಗೂ ಟೋಪಿ ಧರಿಸಿದ್ದ ವ್ಯಕ್ತಿ, ಮನೆ ಗೇಟ್‌ವರೆಗೂ ಬಂದು ಒಳಗೆ ಇಣುಕಿ ನೋಡಿದ್ದು, ಕೆಲ ನಿಮಿಷಗಳ ಕಾಲ ಗೇಟ್ ಮುಂದೆ ಹೊಂಚು ಹಾಕಿ ನಿಂತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ.

ಅಪರಿಚಿತ ಹಿಂಬಾಲಿಸಿದ್ದರಿಂದ ಭೀತಿಗೊಂಡ ಬಾಲಕಿ, ಮನೆ ಕಾಂಪೌಂಡ್ ಒಳಗೆ ಓಡಿ ಹೋಗಿ ಗೇಟ್ ಲಾಕ್ ಮಾಡಿಕೊಂಡು "ಬಾಗಿಲು ತೆಗೆಯಮ್ಮ" ಎಂದು ಕಿರುಚಾಡಿದ್ದಾಳೆ. ಬಳಿಕ ಆತ ನಿಧಾನವಾಗಿ ಅಲ್ಲಿಂದ ತೆರಳಿದ್ದಾನೆ.

ಘಟನೆಯ ನಂತರ ಬಾಲಕಿ ತೀವ್ರ ಆತಂಕಕ್ಕೆ ಒಳಗಾಗಿದ್ದು, ಮೂರು ದಿನಗಳ ಕಾಲ ಜ್ವರದಿಂದ ಬಳಲಿದ್ದಾಳೆ. ಸದ್ಯ ಗುಣಮುಖಳಾಗಿ ಶಾಲೆಗೆ ತೆರಳಿದ್ದಾಳೆ ಎಂದು ತಿಳಿದುಬಂದಿದೆ.

ಈ ಕುರಿತು ಪೋಷಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ ಪೆನ್‌ಷನ್ ಮೊಹಲ್ಲಾ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಸಿಸಿಟಿವಿ ದೃಶ್ಯಗಳ ಆಧಾರದಲ್ಲಿ ಅಪರಿಚಿತನ ಪತ್ತೆಗೆ ಪೊಲೀಸರು ಶೋಧ ಕಾರ್ಯ ಆರಂಭಿಸಿದ್ದಾರೆ.

ನಗರದಲ್ಲಿ ನಡೆದ ಈ ಘಟನೆ ಪೋಷಕರಲ್ಲಿ ಆತಂಕ ಮೂಡಿಸಿದ್ದು, ಶಾಲಾ ಮಕ್ಕಳ ಸುರಕ್ಷತೆಗಾಗಿ ಹೆಚ್ಚಿನ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ದ್ವಿತೀಯ ವರ್ಷದ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಒಂದು ದೇಶದ ಹಿರಿಮೆ ಆ ದೇಶದಲ್ಲಿ ವಾಸಿಸುತ್ತಿರುವ ವಿದ್ಯಾವಂತರನ್ನು ಅವಲಂಬಿಸಿದೆ ಎಂದು ಆಚಾರ್ಯ ಕಾಮರ್ಸ್ ಕಾಲೇಜಿನ ಪ್ರಾಶುಪಾಲ ಡಾ ಆದರ್ಶ ಅಭಿಪ್ರಾಯಪಟ್ಟರು.

ಆಚಾರ್ಯ ಕಾಮರ್ಸ್ ಕಾಲೇಜಿನವರು ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಂಡಿದ್ದ ದ್ವಿತೀಯ ವರ್ಷದ ಪಿಯುಸಿ ವಿದ್ಯಾರ್ಥಿಗಳಿಗೆ ವಿದಾಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನ್ನಾಡುತ್ತ ಇಂದು ವಾಣಿಜ್ಯ ಶಾಸ್ತ್ರವನ್ನು ಕಲಿತ ಪದವೀಧರರಿಗೆ ಬಹಳಷ್ಟು ಅವಕಾಶಗಳಿವೆ.ಈ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಜೀವನದಲ್ಲಿ ಏನಾದರೂ ಸಾಧನೆಯನ್ನು ಮಾಡಿಬಹುದು. ಸಮಾಜಕ್ಕೆ ಹಾಗೂ ನಿಮ್ಮ ಕುಟುಂಬದ ನಡುವೆ ಜೀವಿಸುತ್ತಿರುವ ಯುವಶಕ್ತಿ ದೇಶದ ಆಸ್ತಿಯಾಗಿ ಬದುಕಬಹುದು ಎಂದು ಮಾರ್ಮಿಕವಾಗಿ ನುಡಿದರು. ನಮ್ಮ ಕಾಲೇಜಿನಲ್ಲಿ ಪ್ರತಿ ವರ್ಷವೂ ಪ್ರತಿಶತ ನೂರರಷ್ಟು ಫಲಿತಾಂಶ ಬರುತ್ತಿದೆ ಹಾಗಾಗಿ ದಾಖಲಾತಿ ಆರೋಗ್ಯಕರವಾಗಿದೆ ಎಂದರು.




ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ ನಂ ಲೋಕೇಶ್ ಮಾತನಾಡುತ್ತಾ ಪಿಯುಸಿ ನಂತರ ವಿದ್ಯಾರ್ಥಿಗಳು ಪದವಿ ತರಗತಿಗಳಿಗೆ ಸೇರ್ಪಡೆ ಹೊಂದಿ ಪದವಿಯನ್ನು ಪಡೆದ ನಂತರ ಹಲವಾರು ಉದ್ಯೋಗಗಳನ್ನು ಹರಸಿ ಯಾವುದಾದರೂ ಒಂದು ಉದ್ಯೋಗವನ್ನು ಗಿಟ್ಟಿಸಿಕೊಳ್ಳುವಿರಿ. ದ್ವಿತೀಯ ಪಿಯುಸಿ ನಿಮ್ಮ ಮುಂದಿನ ಜೀವನದ ಪರ್ವಕಾಲ. ಈ ಸಮಯದಲ್ಲಿ ನೀವು ತೆಗೆದುಕೊಂಡ ನಿರ್ಧಾರ ನಿಮ್ಮನ್ನು ಆ ನಿಟ್ಟಿನಲ್ಲಿ ಕೊಂಡೊಯ್ಯಬಲ್ಲದು. ನೀವು ತೆಗೆದುಕೊಳ್ಳುವ ನಿರ್ಧಾರ ಒಳ್ಳೆಯದಾಗಿರಬೇಕಷ್ಟೆ. ಕೇವಲ ನಿರ್ಧಾರ ತೆಗೆದುಕೊಂಡರೆ ಸಾಲದು ಅದನ್ನು ಬೆನ್ನಟ್ಟಬೇಕು ಆಗ ಮಾತ್ರ ನಿಮ್ಮ ಗುರಿ ಸಾಧಿತವಾಗಲು ಸಾಧ್ಯವಾಗುತ್ತದೆ ಎಂದರು.

# ಎಲ್ಲರಿಗೂ ಆರೋಗ್ಯ ಕಾಳಜಿಯಿರಲಿ

## ಉಚಿತ ಆರೋಗ್ಯ-ರಕ್ತದಾನ ಶಿಬಿರ ಉದ್ಘಾಟಿಸಿ ಡಾ.ಶ್ರೀ ನಿರ್ಮಲಾನಂದಸ್ವಾಮೀಜಿ ನುಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮನುಷ್ಯ ಸಂಘ ಜೀವಿ. ಪ್ರತಿಯೊಬ್ಬ ವ್ಯಕ್ತಿ ಕೂಡ ಸಮಾಜದ ಆಸ್ತಿ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಶ್ರೀ ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕರೆ ನೀಡಿದರು.



ನಗರದ ಎಂ.ಜಿ.ರಸ್ತೆಯಲ್ಲಿರುವ ಆದಿ ಚುಂಚನಗಿರಿ ಆಂಗ್ಲಮಾಧ್ಯಮ ಶಾಲಾ ಆವರಣದಲ್ಲಿ ಪರಮಪೂಜ್ಯ ಜಗದ್ಗುರು, ಭೈರವೈಕ್ಯ, ಪದ್ಮಭೂಷಣ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಜನ್ಮ ದಿನೋತ್ಸವ ಅಂಗವಾಗಿ, ಶ್ರೀ ಆದಿಚುಂಚನಗಿರಿ ವಿವಿ, ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆದಿಚುಂಚನಗಿರಿ ಆಸ್ಪತ್ರೆ ಆಶ್ರಯದಲ್ಲಿ ಜ.20 ರಂದು ಬೃಹತ್ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ದೇಹಕ್ಕೆ ಕಾಯಿಲೆ ಬರುವ ಮುಂಚೆ ಮನಸ್ಸಿಗೆ ಕಾಯಿಲೆ ಬಂದಿರುತ್ತದೆ. ಆಗ ನಾವು ಸರಿಮಾಡಿಕೊಂಡರೆ ದೇಹಕ್ಕೆ ಬರುವುದನ್ನು ತಡೆಯಬಹುದು. ರೋಗ ಬರುವುದರಿಂದ ಸಮಸ್ಯೆಯಾಗುವುದಿಲ್ಲ.

ಸಣ್ಣ ಸಮಸ್ಯೆ ಕಂಡು ಬಂದಾಗ ವೈದ್ಯರನ್ನು ಭೇಟಿಯಾದರೆ ದೊಡ್ಡ ಸಮಸ್ಯೆ ತಡೆಗಟ್ಟಬಹುದು ಎಂದರು.

ಇಂದಿನ ಯುವ ಜನಾಂಗ ಅಶಿಸ್ತಿನ ಜೀವನದಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆರೋಗ್ಯದ ಜೊತೆಗೆ ಹಣವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಇಂದು ಹೃದಯ ಸಮಸ್ಯೆ ಎಂದರೆ ದೊಡ್ಡ ಸಮಸ್ಯೆ ಎಂದುಕೊಂಡಿದ್ದಾರೆ. ಇದು ತಪ್ಪು ಕಲ್ಪನೆ.

ಇಂದು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸುಲಭವಾಗಿ ಚಿಕಿತ್ಸೆ ನೀಡಬಹುದು. ದೊಡ್ಡ ದೊಡ್ಡ ಶಸ್ತ್ರ ಚಿಕಿತ್ಸೆಗಳು ಕೆಲವೇ ಗಂಟೆಗಳಲ್ಲಿ ಮುಗಿದು ಹೋಗುತ್ತವೆ. ಆದ್ದರಿಂದ ಯಾರೂ ಭಯಪಡುವ ಅಗತ್ಯವಿಲ್ಲ ಎಂದರು.

ವಿದ್ಯಾರ್ಥಿಗಳು ಓದಿದ ನಂತರದಲ್ಲಿ ತಾವು ಓದಿದ ಶಾಲೆ, ಕಾಲೇಜು, ಗುರುಗಳಿಗೆ ಕೃತಜ್ಞರಾಗಿರಬೇಕು, ಜೊತೆಗೆ ಜೀವನದಲ್ಲಿ ಸನ್ನಡತೆ ಹೊಂದಿದ್ದರೆ ಉತ್ತಮ ಜೀವನ ರೂಪಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಶಾಸಕ ಎಚ್.ಪಿ. ಸ್ವರೂಪ್ ಪ್ರಕಾಶ್ ಮಾತನಾಡಿ, ಶ್ರೀ ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಶ್ರೀಗಳು, ಗ್ರಾಮೀಣ ಪ್ರದೇಶದ ಜನರಿಗೂ ಕಡಿಮೆ ದರದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಲಭಿಸಬೇಕು ಎಂಬ ಆಶಯ ಹೊಂದಿದ್ದರು.

ಅದರಂತೆ ಶ್ರೀಮಠದ ವತಿಯಿಂದ ಪ್ರತಿ ವರ್ಷ ಅವರ ಜನ್ಮ ದಿನಾಚಣೆಯಂದು ಉಚಿತ ಬೃಹತ್ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿಕೊಂಡು ಬರಲಾಗುತ್ತಿದೆ.

ಬೆಂಗಳೂರಿನ ಖ್ಯಾತ ವೈದ್ಯರು ಕೂಡ ಶಿಬಿರದಲ್ಲಿ ಭಾಗವಹಿಸಿರುವುದು ನಮ್ಮ ಸೌಭಾಗ್ಯ. ಜಿಲ್ಲೆಯ ಜನತೆ ಶಿಬಿರ ಯಶಸ್ವಿಗೊಳಿಸಬೇಕೆಂದ ಅವರು, ನಾನೂ ಕೂಡ ಶ್ರೀಮಠದ ಎಲ್ಲಾ ಕಾರ್ಯಗಳಿಗೂ ಸಹಕಾರ ನೀಡುತ್ತೇನೆ ಎಂದು ತಿಳಿಸಿದರು.

ಶ್ರವಣಬೆಳಗೊಳ ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಆದಿಚುಂಚನಗಿರಿಯನ್ನು ಚಿನ್ನದ ಗಿರಿಯನ್ನಾಗಿ ಮಾಡಿದವರು ಶ್ರೀ ಬಾಲಗಂಗಾಧರನಾಥ ಶ್ರೀಗಳು. ಶ್ರೀ ಮಠದ ವಿದ್ಯಾಸಂಸ್ಥೆಗಳಲ್ಲಿ 1.60 ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಹೆಮ್ಮೆಯ ವಿಷಯ. ಬೆಳ್ಳೂರಿನಲ್ಲಿ ಹೈಟೆಕ್ ಆಸ್ಪತ್ರೆ ತೆರೆದು ಜನಸಾಮನ್ಯರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಶ್ರೀಮಠದ ನಿರ್ಮಾಲಾನಂದನಾಥ ಸ್ವಾಮೀಜಿ ಅವರು ಸರ್ವ ಜನಾಂಗದವರೂ, ಸನ್ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ನೀಡುತ್ತಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘದ ಎಲ್ಲಾ ಚಟುವಟಿಕೆಗಳು ಪೂಜ್ಯ ಶ್ರೀಗಳ ಆಶೀರ್ವಾದಿಂದ ನಢಯುತ್ತಿದೆ. ಇಂದು ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ನಾನು ಮೂರು ಬಾರಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕನಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ ಎಂದ ಅವರು, ರಾಜ್ಯ ಒಕ್ಕಲಿಗರ ಸಂಘಧ ವತಿಯಿಂದ ಹಾಸನದಲ್ಲಿ ಸುಮಾರು ಹತ್ತು ಎಕರೆ ಜಮೀನು ಖರೀದಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುಗೆ ನೀಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ರಘುಗೌಡ, ಬಾಗೂರು ಮಂಜೇಗೌಡ, ರೆಡ್ ಕ್ರಾಸ್ ಸಂಸ್ಥೆಯ ಎಚ್.ಪಿ. ಮೋಹನ್, ಕಂಚಮಾರನಹಳ್ಳಿ ಕಾಂತರಾಜು, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ. ಮದನಗೌಡ, ಜಿಲ್ಲಾಧ್ಯಕ್ಷ ಕೆಂಚೇಗೌಡ, ರವಿ ನಾಕಲಗೂಡು ಮೊದಲಾದವರಿದ್ದರು.

> ಇತ್ತೀಚಿಗೆ ಕೆಲವರು ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಆದರೆ ಆಸ್ಪತ್ರೆಗೆ ಹೋಗಲು ಹಿಂಜರಿಯುತ್ತಾರೆ. ಆದರೆ ಹೆಂಡದ ಅಂಗಡಿ ಕಡೆ ಹೋಗಬೇಕಾದರೆ ನಾಚಿಕೆಯಾಗುವುದಿಲ್ಲ. ಸರಳ ಕಾಯಿಲೆಯನ್ನು ದೊಡ್ಡ ಕಾಯಿಲೆ ಎಂದು ಭಾವಿಸಿದರೆ ಆರೋಗ್ಯವನ್ನು ಹಾಳು ಮಾಡಿಕೊಳ್ಳಬೇಕಾಗುತ್ತದೆ. ವೈದ್ಯರ ಸಲಹೆಯನ್ನು ಪಾಲಿಸಿದರೆ ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇರುತ್ತದೆ ಎಂದರು.

## ಮಾಡಾಳು: ನೀಲಲೋಚನ ಸ್ವಾಮೀಜಿ ಪುಣ್ಯಸ್ಮರಣೆ



ಮಾಡಾಳು: ಸುಕ್ಷೇತ್ರ ಹಾರನಹಳ್ಳಿ ಕೋಡಿಮಠದ ಲಿಂಗೈಕ್ಯ ಶ್ರೀ ನೀಲಲೋಚನ ಸ್ವಾಮೀಜಿ ಅವರ ಪುಣ್ಯ ಸಂಸ್ಮರಣೋತ್ಸವ ನಿಮಿತ್ತ ಕರ್ತೃ ಗದ್ದಿಗೆಗೆ ಪುರೋಹಿತರಿಂದ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಯನ್ನು ನೂರಾರು ಭಕ್ತರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ಸೋಮವಾರ ನೆರವೇರಿಸಲಾಯಿತು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ಮೂಲಸ್ಥಾನ ಶ್ರೀ ಸ್ವರ್ಣ ಗೌರಮ್ಮ ದೇವಿ ದೇವಾಲಯದಲ್ಲಿ ಕೋಡಿಮಠ ಮಹಾಸಂಸ್ಥಾನದ ವತಿಯಿಂದ ಆಯೋಜಿಸಲಾಗಿದ್ದ ಮಹಾ ತಪಸ್ವಿ ಲಿಂಗೈಕ್ಯಶ್ರೀ ನೀಲಲೋಚನ ಮಹಾಸ್ವಾಮೀಜಿ ಅವರ ಸ್ಮರಣೋತ್ಸವ ಅಂಗವಾಗಿ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಲಾಯಿತು.

ಸಂಜೆ 4.30ಕ್ಕೆ ಸರಿಯಾಗಿ ಗ್ರಾಮದ ಮೂಲ ಸನ್ನಿಧಿ ಅಮ್ಮನವರ ಬಾವಿಯಿಂದ ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಶ್ರೀ ಶಿವಲಿಂಗಜ್ಜಯ್ಯನವರ ಮೂರ್ತಿ ಮತ್ತು ಶ್ರೀ ನೀಲಲೋಚನ ಭಾವಚಿತ್ರ ಪ್ರತಿಷ್ಠಾಪಿಸಿ ವೀರಗಾಸೆ ಕುಣಿತ ಮಂಗಲ ಕರಡೇವು ವಾದ್ಯದೊಂದಿಗೆ ಉತ್ಸವದಲ್ಲಿ ಮೂಲಸ್ಥಾನ ಗೌರಮ್ಮ ದೇವಿ ದೇವಾಲಯಕ್ಕೆ ಕೋಡಿ ಮಠದ ಉತ್ತರಾಧಿಕಾರಿ ಚೇತನ್ ಮರಿದೇವರ ನೇತೃತ್ವದಲ್ಲಿ ನೂರಾರು ಸಂಖ್ಯೆಯ ಭಕ್ತರೊಡಗೂಡಿ ದೇವಾಲಯಕ್ಕೆ ಕರೆತರಲಾಯಿತು.

ಪುಟಾಣಿ ಹೆಣ್ಣು ಮಕ್ಕಳ ನೃತ್ಯ ಉತ್ಸವಕ್ಕೆ ಮೆರಗು ನೀಡಿ ಜನರ ಮೆಚ್ಚುಗೆಗೆ ಪಾತ್ರವಾಯಿತು. ಉತ್ಸವದಲ್ಲಿ ಮೂಲಸ್ಥಾನ ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್ ನಟರಾಜ್, ಗೌರವಾಧ್ಯಕ್ಷ ಮಲ್ಲಿಕಾರ್ಜುನಪ್ಪ ಕೋಡಿಮಠ ಏಜೆಂಟ್ ಸಿ.ಮಹದೇವಪ್ಪ ಮುಖಂಡರಾದ ಎಂ.ಸಿ ನಟರಾಜ್ ಎಂಜಿ ಶಿವಣ್ಣ ಎಂ.ಎಸ್ ಮುರುಳೇಗೌಡ ಮಾಡಾಳು ಶಿವಲಿಂಗಪ್ಪ ಅಶೋಕ್ ಎಂ ಶಂಕ್ರಪ್ಪ ದೊಮ್ಮೇನಹಳ್ಳಿ ಟಿ.ಲೋಕೇಶ್ ಎಂ.ಡಿ ಸೋಮಶೇಖರ ಹೆಚ್. ಕೆ ಚಂದ್ರಪ್ಪ ದಾಸಪ್ಪ ಕಟ್ಟಿ ತಿಮ್ಮಯ್ಯ ಮುಂತಾದವರು ಪಾಲ್ಗೊಂಡಿದ್ದರು.

## ಮುರುಳಿಮೋಹನ್ ಉಚ್ಚಾಟನೆಗೆ ಆಗ್ರಹ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಮುರುಳಿಮೋಹನ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆ ಮಾಡುವಂತೆ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ ಕುಮಾರಶೆಟ್ಟಿ ಆಗ್ರಹಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಹಿರಿಯ ಮುಖಂಡರು, ಜಿಪಂ ಅಭ್ಯರ್ಥಿ, ಸ್ಥಾಯಿ ಸಮಿತಿ ಅಧ್ಯಕ್ಷ, ಎಂಎಲ್ಎ ಅಭ್ಯರ್ಥಿ ಡಿ.ಸಿ.ಸಣ್ಣಸ್ವಾಮಿ ಅವರ ಮೇಲೆ ಮುರುಳಿ ಮೋಹನ್ ಹಲ್ಲೆ ಮಾಡಿರುವುದು ಖಂಡನೀಯ ಎಂದರು.

ಜ.16 ರಂದು ಜಿಲ್ಲಾ ಉಸ್ತುವಾರಿ ಸಚಿವರು ಸಕಲೇಶಪುರದಲ್ಲಿ ಜನ ಸ್ಪಂದನಾ ಸಭೆ ನಂತರ, ಅಧಿಕಾರಿಗಳ ಸಭೆ ನಡೆಸಲು ಹೋಗುತ್ತಿದ್ದಾಗ ಸಣ್ಣಸ್ವಾಮಿ ಅವರು ಕ್ಷೇತ್ರದ ವಿವಿಧ ಸಮಸ್ಯೆಗಳ ನಿವಾರಣೆ ಸಂಬಂಧ ತಮ್ಮ ಮನವಿ ಸಲ್ಲಿಸಲು ಹೋದಾಗ, ಮುರುಳಿ ಮೋಹನ್ ದರ್ಪ ತೋರಿದ್ದಾರೆ.

ಗೇಟಿನ ಮುಂಭಾಗ ತಡೆದು ಏಕ ವಚನದಿಂದ ನಿಂದಿಸಿ, ಹಲ್ಲೆ ಮಾಡಿ ಬಟ್ಟೆ ಹರಿದಿದ್ದಾರೆ. ಅಷ್ಟೇ ಅಲ್ಲದೆ ಸಣ್ಣಸ್ವಾಮಿ ಅವರನ್ನು ಎಳೆದಾಡಿ ಇವರನ್ನು ಒಳಗಡೆ ಬಿಡಬೇಡಿ ಎಂದು ಪೊಲೀಸರಿಗೆ ಹೇಳಿ ಹೊರ ಹಾಕಿದ್ದು ಖಂಡನೀಯ.

ಹೊರಗಿನಿಂದ ಬಂದು ಸ್ಥಳೀಯ ಹಿರಿಯ ಮುಖಂಡರ ಮೇಲೆ ಕೈ ಮಾಡಿದ ಮುರುಳಿ ಮೋಹನ್ ಅವರನ್ನು ಕೂಡಲೇ ಪಕ್ಷದಿಂದ ಹೊರ ಹಾಕಬೇಕು ಎಂದು ಒತ್ತಾಯಿಸಿದರು.

ಹಲ್ಲೆ ಮಾಡಿರುವ ಮುರುಳಿ ಮೋಹನ್ ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಮುಂದಿನ ಚುನಾವಣೆಯಲ್ಲಿ ಮುರುಳಿ ಮೋಹನ್‌ಗೆ ಯಾವುದೇ ಕಾರಣಕ್ಕೂ ಟಿಕೆಟ್ ಕೊಡಬಾರದು. ಅಕಸ್ಮಾತ್ ನೀಡಿದರೆ ಸೋಲು ಖಚಿತ ಎಂದು ಎಚ್ಚರಿಸಿದರು.

ಒಬ್ಬ ಮುಖಂಡರ ಮೇಲೆ ಹಲ್ಲೆ ಮಾಡಿರುವ ಮುರುಳಿ ಮೋಹನ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಶೀಘ್ರವೇ ಬೆಂಗಳೂರಿಗೆ ನಿಯೋಗ ತೆರಳಿ ಸಿಎಂ, ಡಿಸಿಎಂ ಸೇರಿದಂತೆ ಎಲ್ಲರಿಗೂ ದೂರು ನೀಡುವುದಾಗಿ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ, ಮುಖಂಡರಾದ ಅಶೋಕ್ ನಾಯಕರಹಳ್ಳಿ, ವೆಂಕಟೇಶ್, ಮಣಿಕಂಠಸ್ವಾಮಿ ಮೊದಲಾದವರಿದ್ದರು.

## ಆವಿಷ್ಕಾರಗಳಿಂದಲೇ ಅವನತಿ: ಕೆಎಂಶಿ ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ದೈವ ಸಂಕಲ್ಪದಂತೆ ಜಗತ್ತು ಸಾಗುತ್ತಿದೆ, ವಿಜ್ಞಾನ ಲೋಕದಲ್ಲಿ ಆಗಿರುವ, ಆಗುತ್ತಿರುವ ಆವಿಷ್ಕಾರಗಳೇ ಮುಂದಿನ ದಿನಗಳಲ್ಲಿ ಮನುಕುಲದ ಅವನತಿಗೆ ಕಾರಣ ಆಗುವುದರಲ್ಲಿ ಸಂದೇಹವಿಲ್ಲ ಎಂದು ರಾಜ್ಯಗೃಹ ನಿರ್ಮಾಣ ಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ ಶಿವಲಿಂಗೇಗೌಡ ಪ್ರತಿಪಾದಿಸಿದರು.



ತಾಲೂಕಿನ ಮಾಡಾಳು ಗ್ರಾಮದ ಮೂಲ ಸ್ವರ್ಣಗೌರಿ ಅಮ್ಮನ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ ಕೋಡಿಮಠದ ಲಿಂಗೈಕ್ಯ ಶ್ರೀ ನೀಲಲೋಚನ ಮಹಾಸ್ವಾಮಿಗಳ ಪುಣ್ಯ ಸ್ಮರಣೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಭೂಮಿಯ ಮೇಲೆ ಅಧರ್ಮ ಹೆಚ್ಚಾದಾಗಲೆಲ್ಲ ದಶಾವತಾರದ ಮೂಲಕ ಭಗವಂತ ಧರೆಯನ್ನು ಉದ್ಧರಿಸಿದ್ದನ್ನು ನಾವು ನಮ್ಮ ಪುರಾಣದ ಮೂಲಕ ತಿಳಿದುಕೊಂಡಿದ್ದೇವೆ.

ಅದೇ ರೀತಿ ಕಲಿಯುಗದಲ್ಲಿ ಭಗವಂತ ಕಲ್ಲಾಗಿ ಇದ್ದರೂ ವಿಜ್ಞಾನಿಗಳ ಮೂಲಕ ಕ್ಷಣಮಾತ್ರದಲ್ಲಿ ಲಕ್ಷಾಂತರ ಮಂದಿಯನ್ನು ಕೊಳ್ಳುವಂತ ಅಣುಬಾಂಬ್ ಗಳನ್ನು ಭಗವಂತನೇ ಸಿದ್ಧ ಪಡಿಸಿ ಇಟ್ಟಿರುವಂತೆ ಕಾಣುತ್ತದೆ ಎಂದರು.

ಮನುಕುಲ ಈ ದುಷ್ಟ ಶಕ್ತಿಯಿಂದ ತಪ್ಪಿಸಿಕೊಳ್ಳಬೇಕಾದರೆ ಮಹಾ ತಪಸ್ವಿಗಳಾದ ಕೋಡಿಮಠದಂತ ಶ್ರೀಗಳ ಹಿತವಚನ ಆಲಿಸಿ ಅದರಂತೆ ಬದುಕು ಸಾಗಿಸದೇ ಹೋದರೆ ಮನುಕುಲದ ಅವನತಿ ಮನುಷ್ಯನಿಂದಲೇ ಆಗಲಿದೆ ಎಂದು ಹೇಳಿದರು.

ಮೂಲ ಸ್ವರ್ಣ ಗೌರಿ ಅಮ್ಮನವರ ದ್ವಾರ ಬಾಗಿಲು ನಿರ್ಮಾಣಕ್ಕೆ 10 ಲಕ್ಷ ನೀಡಿದ್ದು, ಮುಂದಿನ ದಿನಗಳಲ್ಲೂ ಸಹ ದೇವಾಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ನನ್ನ ಸಂಪೂರ್ಣ ಸಹಕಾರ ನೀಡುವುದಾಗಿ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಬೆಕ್ಕಿನ ಕಲ್ಮಠದ ಡಾ.ಮಲ್ಲಿಕಾರ್ಜುನ ಮುರುಘ ರಾಜೇಂದ್ರ, ಶ್ರೀಗಳು ಮಾತನಾಡಿ, ಲಿಂಗ ನಿಷ್ಠರಾಗಿದ್ದ ನೀಲಲೋಚನ ಸ್ವಾಮೀಜಿಗಳು ಮಹಾ ತಪಸ್ವಿಗಳಾಗಿದ್ದರು. ಆ ಮೂಲಕ ಈ ಭಾಗದ ಭಕ್ತರಿಗೆ ದಾರಿದೀಪವಾಗಿದ್ದರು. ದೈಹಿಕವಾಗಿ ನೀಲಲೋಚನ ಶ್ರೀಗಳು ನಮ್ಮೊಂದಿಗೆ ಇಲ್ಲದಿದ್ದರೂ ಅವರ ಮಹಿಮೆ ಭಕ್ತರನ್ನು ಇಂದಿಗೂ ಉದ್ಧರಿಸುತ್ತಾ ಇದೆ ಎಂದರು.

ಶಿವಲಿಂಗಜ್ಜಯ್ಯ ಅವರು ಕೋಟಿ ಜಪದ ಮೂಲಕ ಸಿದ್ಧಿಸಿ ಕೊಟ್ಟಿರುವ ಮೂಲ ಸ್ವರ್ಣಗೌರಿ ಅಮ್ಮನವರಿಗೆ ತೊಡಿಸುವ ಮೂಗುತಿ ಹಾಗೂ ಪ್ರಸ್ತುತ ಕೋಡಿಮಠದ ಜಗದ್ಗುರು

ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳ ಅನುಗ್ರಹದಿಂದ ಈ ಕ್ಷೇತ್ರ ಮುಂದಿನ ದಿನಗಳಲ್ಲಿ ಉತ್ತುಂಗಕ್ಕೆ ಏರುವುದಷ್ಟೇ ಅಲ್ಲದೆ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಮಹಾ ಕ್ಷೇತ್ರವಾಗಿ ಬೆಳಗಲಿದೆ ಎಂದರು.

ಮಾಜಿ ಶಾಸಕ ಜಿ.ಎಸ್ ಪರಮೇಶ್ವರಪ್ಪ ಮಾತನಾಡಿ, ಸುಕ್ಷೇತ್ರ ಹಾರನಹಳ್ಳಿ ಕೋಡಿಮಠ ಯಾವುದೇ ಒಂದು ಜಾತಿ ಧರ್ಮಕ್ಕೆ ಸೀಮಿತವಾಗದೆ ನಂಬಿ ಬರುವ ಭಕ್ತರ ಪಾಲಿಗೆ ವರ ನೀಡುವ ಶಕ್ತಿ ಪೀಠವಾಗಿದೆ.

ಶಿವಲಿಂಗಜ್ಜಯ್ಯ, ನೀಲಮ್ಮಜ್ಜಯ್ಯ, ಅವರಂತ ಮಹಾ ತಪಸ್ವಿಗಳು ನಡೆದಾಡಿದ ಪುಣ್ಯಭೂಮಿ ಈ ಪ್ರದೇಶವಾಗಿದ್ದು, ಲಿಂಗೈಕ್ಯ ನೀಲಲೋಚನ ಸ್ವಾಮಿಗಳು ತೋರಿದ ದಾರಿಯಲ್ಲಿ ಪ್ರಸ್ತುತ ಜಗದ್ಗುರು ಡಾ.ಶಿವಯಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿಗಳು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಮುನ್ನಡೆಸಿಕೊಂಡು ಹೋಗುತ್ತಿರುವುದು ನಮ್ಮ ಸೌಭಾಗ್ಯವಾಗಿದೆ ಎಂದು ತಮ್ಮ ನುಡಿ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕೋಡಿಮಠದ ಉತ್ತರಾಧಿಕಾರಿಗಳಾದ ಚೇತನ್ ಮರಿದೇವರು, ಹಾನಗಲ್ ವಿರಕ್ತಮಠದ ಶಿವಯೋಗೀಶ್ವರ ಸ್ವಾಮೀಜಿ, ಹಿರೇಮಠದ ಮೃತ್ಯುಂಜಯ ಸ್ವಾಮೀಜಿ, ಮಾಡಾಳು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ, ಕಡೂರು ಮೂರು ಕಳಸ ಮಠದ ಜ್ಞಾನಪ್ರಭು ದೇಶಿ ಕೇಂದ್ರ ಸ್ವಾಮೀಜಿ, ಕೊಳಗುಂದ ಕೇದಿಗೆ ಮಠದ ಜಯಚಂದ್ರ ಶೇಖರ ಸ್ವಾಮೀಜಿ ಆಶೀರ್ವಚನ ನೀಡಿದರೆ, ಮಾಜಿ ಶಾಸಕ ಕೆ.ಪಿ ಪ್ರಭುಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಶಿಧರ್, ವೈದ್ಯ ಡಾ.ಶಿವಕುಮಾರ್, ಕೋಡಿಮಠದ ಏಜೆಂಟ್ ಮಾದೇವಪ್ಪ, ಮೂಲ ಸ್ವರ್ಣಗೌರಿ ಅಮ್ಮನವರ ದೇವಾಲಯದ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಟರಾಜ್, ಮುಖಂಡರಾದ ಮಾಡಾಳು ಶಿವಲಿಂಗಪ್ಪ ಮೊದಲಾದವರಿದ್ದರು.

## ಆಲ್ಫಾ ಕನ್ನಡ ಚಿತ್ರ ಫೆ.20 ರಂದು ಬಿಡುಗಡೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆಲ್ಫಾ, ಮೆನ್ ಲವ್ ವಾಯ್‌ಲೆನ್ಸ್ ಕನ್ನಡ ಚಲನಚಿತ್ರ ಫೆ.20 ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ ಎಂದು ಚಿತ್ರದ ನಾಯಕ ನಟ ಹೇಮಂತ್ ಕುಮಾರ್ ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ನನ್ನದು ಮಿಡಲ್ ಕ್ಲಾಸ್ ಹುಡುಗನ ಪಾತ್ರ, ಚಿತ್ರ ಎಲ್ಲರಿಗೂ ಕನೆಕ್ಟ್ ಆಗುತ್ತದೆ ಎಂದರು.

ಒಂದು ಉತ್ತಮ ಕತೆಯ ಮೇಲೆ ಚಿತ್ರ ಸಾಗುತ್ತದೆ. ಒಂದೊಳ್ಳೆ ಕಮರ್ಷಿಯಲ್ ಚಿತ್ರ ಕೂಡ. ಹಲವು ಹಿರಿಯ ನಟ-ನಟಿಯರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ತಂದೆ-ಮಗನ ಸೆಂಟಿಮೆಂಟ್ ಚೆನ್ನಾಗಿದೆ. ಇಡೀ ಕುಟುಂಬದವರು ಯಾವುದೇ ಮುಜುಗಜ ಇಲ್ಲದೆ ಚಿತ್ರ ನೋಡಬಹುದು ಎಂದರು.




ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಚಿತ್ರದ ಟೀಚರ್ ಪ್ರೇಕ್ಷಕರ ಮನ ಗೆದ್ದಿದೆ. ಹೆಸರಿಗೆ ತಕ್ಕಂತೆ ಪ್ರತಿಯೊಂದು ಪಾತ್ರಗಳೂ ಪ್ರಬಲ ಆಗಿವೆ ಎಂದರು.

ನಮ್ಮ ಚಿತ್ರದಲ್ಲಿ ಡ್ಯಾನ್ಸ್, ಕಂಟೆಂಟ್ ಚೆನ್ನಾಗಿದೆ. ಇಷ್ಟದಿಂದ ಕಷ್ಟಪಟ್ಟು ಮಾಡಿದ್ದೇವೆ, ಜನರೂ ಇಷ್ಟ ಪಡುವ ವಿಶ್ವಾಸವಿದೆ. ಜನರ ಮನೋರಂಜನೆಗೆ ಬೇಕಾದ ಎಲ್ಲಮೂ ಇದೆ. ಟೀಸರ್, ಹಾಡುಗಳಿಗೆ, ಟೀಸರ್‌ಗೆ ಅದ್ಭುತ ಪ್ರತಿಕ್ರಿಯೆ ಸಿಕ್ಕಿದೆ, ಹೊಸಬರ ಸಿನಿಮಾ ರೀತಿ ಇಲ್ಲ ಎಂದು ಹೇಳಿದರು.

ನಾಯಕ ನಟಿ ಗೋಪಿಕಾ ಸುರೇಶ್ ಮಾತನಾಡಿ, ಚಿತ್ರದಲ್ಲಿ ಎಲ್ಲ ಪಾತ್ರಗಳು ಉತ್ತಮವಾಗಿ ಮೂಡಿ ಬಂದಿವೆ ಎಂದು ತಿಳಿಸಿದರು.

ಮತ್ತೊಬ್ಬ ನಟಿ ಅಯನಾ ಮಾತನಾಡಿ, ಕನ್ನಡದಲ್ಲಿ ಇದು ನನ್ನ ನಾಲ್ಕನೇ ಚಿತ್ರ. ಎಲ್ಲರೂ ಚಿತ್ರವನ್ನು ನೋಡಿ ಹರಸಬೇಕೆಂದು ಮನವಿ ಮಾಡಿದರು. ಇತ್ತೀಚಿನ ದಿನಗಳಲ್ಲಿ ಕನ್ನಡ ಸಿನಿಮಾ ನೋಡುವವರ ಸಂಖ್ಯೆ ಕಡಿಮೆ ಆಗುತ್ತಿದೆ. ಇದಕ್ಕೆ ಕಾರಣ ಹಲವು ಇರಹುದು. ಆದರೆ ಉತ್ತಮ ಕತೆ ಇದ್ದರೆ ಯಾವುದೇ ಸಿನಿಮಾ ಓಡುತ್ತದೆ. ನಮ್ಮ ಚಿತ್ರವೂ ಉತ್ತಮ ಪ್ರದರ್ಶನ ಕಾಣಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಜ.25ರಂದು ಮಸ್ತಕಾಭಿಷೇಕ ಕಾರ್ಯಕ್ರಮ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಬಸ್ತಿಹಳ್ಳಿಯ ಜೈನ ಬಸದಿಯಲ್ಲಿರುವ ಹೊಯ್ಸಳರ ಕಾಲದ 18 ಅಡಿ ಎತ್ತರದ ಶಾಂತಿನಾಥ ತೀರ್ಥಂಕರರ ಮೂರ್ತಿಗೆ ಜನವರಿ 25 ರಂದು ಹಾಸನದ ದಿಗಂಬರ ಜೈನ ಯುವಕ ಸಂಘ, ದೊಡ್ಡ ಬಸದಿ ಜೈನ ಸಂಘ ಹಾಗೂ ಹಾಸನದ ಸಮಸ್ತ ಜೈನ ಸಮಾಜದ ಆಶ್ರಯದಲ್ಲಿ ಮಸ್ತಕಾಭಿಷೇಕ ನೆರವೇರಲಿದೆ.

.ಶ್ರವಣಬೆಳಗೊಳ ಜೈನ ಮಠದ ಅಭಿನವ ಚಾರುಕೀರ್ತಿ ಪಂಡಿತಚಾರ್ಯವರ್ಯ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಹಾಗೂ ಕಂಬದಹಳ್ಳಿ ಮಠದ ವಿಚಾರ ಪಟ್ಟ ಕ್ಷುಲ್ಲಕ ಆನಂದ ಕೀರ್ತಿ ಸ್ವಾಮೀಜಿ ಸಾನಿಧ್ಯ ವಹಿಸುವರು ಹಾಸನ ದಿಗಂಬರ ಜೈನ ಯುವಕರ ಸಂಘದ ಅಧ್ಯಕ್ಷ ದೇವನಾಗ್. ಎಚ್.ಕೆ ತಿಳಿಸಿದರು. ಜೈನ ಬಸದಿಯಲ್ಲಿ ಹೊಯ್ಸಳರ ಕಾಲದಿಂದಲೂ ವೈಭವದ ಪೂಜಾ ಕಾರ್ಯ ನಡೆದು ಕೊಂಡು ಬಂದಿದೆ. 40 ವರ್ಷದ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಮುಕ್ತಿ ಹಳ್ಳಿಯ ಪಾಯಣ್ಣಶೆಟ್ಟಿ ಸ್ಥಳೀಯರ ಸಹಕಾರ ಪಡೆದು ಮಸ್ತಕಾಭಿಷೇಕ ನೆರವೇರಿಸುತ್ತಿದ್ದರು. ಪಾಯಣ್ಣಶೆಟ್ಟರ ನಂತರ ಹಾಸನ ಜೈನ ಸಮಾಜದ ವಿವಿಧ ಸಂಘಗಳು ಮಸ್ತಕಾಭಿಷೇಕ ನಡೆಸುತ್ತಿರುವ

.ಕಳೆದ 10 ವರ್ಷದಿಂದ ಹಾಸನದ ದಿಗಂಬರ ಜೈನ ಯುವಕ ಸಂಘದವರು ಮಸ್ತಕಾಭಿಷೇಕ ನಡೆಸುತ್ತಿದ್ದಾರೆ.

ಬಸ್ತಿಹಳ್ಳಿಯ ವಿಜಯಿ ಪಾರ್ಶ್ವನಾಥ, ಆದಿನಾಥ ಹಾಗೂ ಶಾಂತಿನಾಥ ತೀರ್ಥಂಕರರ ಮೂರು ಜಿನಮಂದಿಗಳು ಶ್ರವಣಬೆಳಗೂಳ ಚಾರುಕೀರ್ತಿ ಭಟ್ಟಾರಕ ಪೀಠದ ಪರಂಪರೆಯ ವ್ಯಾಪ್ತಿಗೆ ಒಳಪಡುತ್ತವೆ. ಹೀಗಾಗಿ ಶ್ರವಣಬೆಳಗೊಳ ಶ್ರೀಗಳ ಮಾರ್ಗದರ್ಶನದಲ್ಲಿ ಪ್ರತಿವರ್ಷ ಮಸ್ತಕಾಭಿಷೇಕ ನಡೆಸಲಾಗುತ್ತಿದೆ ಎಂದೂ ದೇವನಾಗು ಹೇಳಿದರು.

ಮಸ್ತಕಾಭಿಷೇಕದ ನಂತರ ಶಾಂತಿನಾಥ ತೀರ್ಥಂಕರರ ಪಲ್ಲಕ್ಕಿ ಉತ್ಸವ ನಡೆಯಲಿದೆ. ಸ್ವಾಮೀಜಿಗಳ ಪ್ರವಚನ, ನಂತರ ಪಾದಪೂಜೆ ನೆರವೇರಲಿದೆ. ಎಂದು ಯುವಕರ ಸಂಘದ ಮಾಜಿ ಅಧ್ಯಕ್ಷ ಎಚ್.ಪಿ.ನಾಗರಾಜು ಹೇಳಿದರು.

ಬಸ್ತಿ ಹಳ್ಳಿ ಜೈನ ಬಸದಿಯ ಶಾಂತಿನಾಥ ತೀರ್ಥಂಕರರಿಗೆ ಹಾಸನ ಜೈನ ಸಮಾಜದವರು ಪ್ರತಿ ವರ್ಷ ಮಸ್ತಕಾಭಿಷೇಕ ನಡೆಸುತ್ತಿದ್ದಾರೆ. ಧಾರ್ಮಿಕ ಆಚರಣೆ ಜಾತ್ರೆಯಂತೆ ನಡೆಯಬೇಕು. ಮಸ್ತಕಾಭಿಷೇಕ ಊರಿನ ಉತ್ಸವಕ್ಕಾಗಿ ಬೇಕು ಎಂದು ಅಭಿನವ. ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಿಳಿಸಿದ್ದಾರೆ. ಲೋಕಕಲ್ಯಾಣಾರ್ಥವಾಗಿ ಶಾಂತಿನಾಥ ತೀರ್ಥಂಕರರಿಗೆ ಪ್ರತಿ ವರ್ಷ ಮಸ್ತಕಾಭಿಷೇಕ ನಡೆಸಲಾಗುತ್ತಿದೆ. ತೀರ್ಥಂಕರರು ಹೇಳಿದ ಶಾಂತಿಯ ಸಂದೇಶವನ್ನು ಎಲ್ಲರಿಗೂ ತಿಳಿಸುವುದರೊಂದಿಗೆ ಜಗತ್ತಿನಲ್ಲಿ ಶಾಂತಿ ನೆಲೆಸಲಿ. ಪ್ರತಿಯೊಬ್ಬರಿಗೂ ಸುಖ, ಶಾಂತಿ, ನೆಮ್ಮದಿ ದೊರಕಲಿ. ಸಕಲ ಜೀವಿಗಳಿಗೂ ಒಳಿತಾಗಲಿ ಎಂದು ಪ್ರತಿ ವರ್ಷ ಮಸ್ತಕಾಭಿಷೇಕ ನಡೆಸಲಾಗುತ್ತಿದೆ ಎಂದು ಧನುಷ್ ಹೇಳಿದರು.

## ಜ.27 ರಂದು ಕರ್ನಾಟಕ ಅಂಧರ ಒಕ್ಕೂಟದಿಂದ ಧರಣಿ: ತಮ್ಮಯ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎರಡು ಪ್ರಮುಖ ಸಮಸ್ಯೆಗಳನನು ಮುಂದಿಟ್ಟು ಇದೇ 27ರಂದು ಡಿಸಿ ಕಚೇರಿ ಎದುರು ಧರಣಿ ನಡೆಸಲು ಕರ್ನಾಟಕ ಅಂಧರ ಒಕ್ಕೂಟ ನಿರ್ಧರಿಸಿದೆ.




ಇಂದು ಸುದ್ದಿಗೋಷ್ಟಿಯಲ್ಲಿ ಈ ವಿಷಯ ತಿಳಿಸಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ತಮ್ಮಯ್ಯ, ಧರಣೇಂದ್ರ ಎಂಬ ಅಂಧವ್ಯಕ್ತಿ ಕಳೆದ 25 ವರ್ಷಗಳಿಂದ ನಗರದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ದೂರವಾಣಿ ಪೆಟ್ಟಿಗೆ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು.

2018 ನೇ ಸಾಲಿನಲಿ ಹೊಸ ಕಟ್ಟಡ ನಿರ್ಮಾಣದ ಕಾರಣ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯ ಅಧಿಕಾರಿ ಹಾಗೂ ಅಂದಿನ ಡಿಸಿ ಪ್ರಿಯಾಂಕ ಮೇರಿ ಫ್ರಾನ್ಸಿಸ್ ಅವರ ಮಾನವೀಯ ಪ್ರಯತ್ನದ ಮೇರೆಗೆ ಆಸ್ಪತ್ರೆಯ ಒಂದು ಮೂಲೆಗೆ ದೂರವಾಣಿ ಬೂತ್ ಸ್ಥಳಾಂತರ ಮಾಡಲಾಗಿತ್ತು. ಹೊಸ ಕಟ್ಟಡ ನಿರ್ಮಾಣ ನಂತರ ಮೊದಲ ಜಾಗಕ್ಕೆ ಸ್ಥಳಾಂತರ ಮಾಡಿಸುವ ಭರವಸೆ ನೀಡಲಾಗಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಸ್ಥಳಾಂತರ ಮಾಡದೆ, ತೊಂದರೆ ಕೊಡಲಾಗುತ್ತಿದೆ ಎಂದು ದೂರಿದರು.

ಇದೀಗ ಯಾವುದೇ ವ್ಯಾಪಾರ ಇಲ್ಲದೆ ಧರಣೇಂದ್ರ ಅವರ ಜೀವನ ಕಷ್ಟವಾಗಿದೆ. ಜೀವನ ದುಃಸ್ಥಿತಿಯಲ್ಲಿದೆ. ಈ ಬಗ್ಗೆ ಕೇಳಿದರೆ ಆಡಳಿತ ಮಂಡಳಿ ತೀರ್ಮಾನ ಬೇಕೆಂದು ಹಿಂಬರಹ ನೀಡಲಾಗಿದೆ. ಆದರೆ ಇಬ್ಬರು ಸಾಮಾನ್ಯರಿಗೆ ಜೆರಾಕ್ಸ್ ಮತ್ತು ಔಷಧಿ ಅಂಗಡಿ ಇಟ್ಟುಕೊಳ್ಳಲು ಜಿಸಿ ತೀರ್ಮಾನ ಇಲ್ಲದೇ ಅವಕಾಶ ನೀಡಲಾಗಿದೆ ಎಂದು ಅಳಲು ತೋಡಿಕೊಂಡರು.

ಎರಡನೆಯದಾಗಿ ಜಿಲ್ಲಾ ಅಂಕವಿಕಲರ ಕಲ್ಯಾಣಾಧಿಕಾರಿ ಅನುಪಮಾ ಎಂಬುವರು ಅವಮಾನಕರ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ. ನಮ್ಮನ್ನು ತುಚ್ಚವಾಗಿ ಕಾಣುತ್ತಿದ್ದಾರೆ. ಅಂಗವಿಕಲರ ವಿರುದ್ಧ ದರ್ಪ, ದೌರ್ಜನ್ಯ ಮಾಡುತ್ತಿದ್ದಾರೆ. ಅಂಗವಿಕಲರಿಗೆ ಇರುವ ಸೌಲಭ್ಯಗಳ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಹಾಗಾಗಿ ಕೂಡಲೇ ಇವರ ಡೆಪ್ಟೇಷನ್ ರದ್ದು ಮಾಡಬೇಕು ಎಂದು ಒತ್ತಾಯಿಸಿದರು. ಈ ಹುದ್ದೆಗೆ ಎಂಎಸ್ ಡಬ್ಲ್ಯೂ ಅಥವಾ ವಿಶೇಷ ತರಬೇತಿ ನಿಗದಿಪಡಿಸಲಾಗಿದೆ. ಆದರೆ ಯಾವುದೇ ವಿದ್ಯಾರ್ಹತೆ ಇಲ್ಲದ ಸಚಿವಾಲಯದ ಶಾಖಾಧಿಕಾರಿಯನ್ನು ನಿಯೋಜನೆ ಮಾಡಲಾಗಿದ್ದು, ಇವರ ವಿರುದ್ಧ ಹಿಂದೆಯೂ ಧರಣಿ ನಡೆಸಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದರು.

ಹೀಗಾಗಿ ಮತ್ತೊಮ್ಮೆ ಜ.27 ರಂದು ಡಿಸಿ ಕಚೇರಿ ಎದುರು ಬೆಳಗ್ಗೆಯಿಂದ ಸಂಜೆವರೆಗೆ ಪ್ರತಿಭಟನೆ ಮಾಡಲಾಗುತ್ತಿದೆ ಎಂದರು.

ಸುದ್ದಿಗೋಷ್ಟಿಯಲ್ಲಿ ಚಂದ್ರಶೇಖರ್, ಬಾಬು, ಧರಣೇಂದ್ರ, ಸುದರ್ಶನ್ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248